ಶ್ರೀ ಪದ್ಧತಿ ಮತ್ತು ಪ್ರಚಲಿತ ಪದ್ಧತಿಯಲ್ಲಿನ ವ್ಯತ್ಯಾಸ

ವಿವರ	ಪ್ರಚಲಿತ ಪದ್ಧತಿ (ಒಂದು ಎಕರೆಗೆ)	'ಶ್ರೀ' ಪದ್ಧತಿ (ಒಂದು ಎಕರೆಗೆ)
ಬಿತ್ತನೆ ಬೀಜ	25 ಕೆ.ಜಿ.	2 ಕೆ.ಜಿ.
ನೀರಿನ ಅಗತ್ಯ	50 ಲಕ್ಷ ಲೀಟರ್	21 ಲಕ್ಷ ಲೀಟರ್
ತೆಂಡೆ ಸಾಮರ್ಥ್ಯ	ಸಾಧಾರಣ	ಅತಿ ಹೆಚ್ಚು
ಬೇರಿನ ಬೆಳವಣಿಗೆ	ಕುಂಠಿತ	ಉತ್ತಮ
ರೋಗ/ಕೀಟ ಬಾಧೆ	ಹೆಚ್ಚು	ಕಡಿಮೆ
ಕಾಳಿನ ಇಳುವರಿ	17.88 ಕ್ವಿ	24.4 ಕ್ವಿ
ಹುಲ್ಲಿನ ಇಳುವರಿ	2.5 ಟನ್	3 ಟನ್
ಖರ್ಚು	10820 ರೂ.	10117 ರೂ.
ನಿವ್ವಳ ಆದಾಯ	11978 ರೂ.	16140 ರೂ.

ಮಾಹಿತಿ ಮೂಲ:
ಅರೆ ನೀರಾವರಿ ಭತ್ತದ ಬೇಸಾಯ ಅನುಭವಗಳು,
ಪ್ರಕಟಣೆ: ಕೃಷಿ ವಿ.ವಿ. ಬೆಂಗಳೂರು

ಮಣ್ಣಿನ ಗುಣಧರ್ಮ ಹಾಗೂ ರಚನೆಯಲ್ಲಿ ಸುಧಾರಣೆ

ಶ್ರೀ ಪದ್ಧತಿಯಲ್ಲಿ ತೇವಾಂಶ ಕಾಪಾಡುವಷ್ಟು ಮಾತ್ರ ನೀರು ಬಿಡುವುದರಿಂದ ಮಣ್ಣಿನಲ್ಲಿ ಗಾಳಿ ಸರಾಗವಾಗಿ ಸಂಚರಿಸಲು ಅನುಕೂಲ. ಇದರಿಂದ ಸೂಕ್ಷ್ಮಾಣುಜೀವಿಗಳ ಕ್ರಿಯೆಗೆ ಉಪಯೋಗವಾಗಿ ಮಣ್ಣಿನ ರಚನೆಯಲ್ಲಿ ಸವುಳು ಉಂಟಾಗುವುದು ಕಡಿಮೆ.

ಇಳುವರಿ ಹೆಚ್ಚಳ

ಗುಣಿಗೆ ಒಂದು ಅಥವಾ ಎರಡೇ ಪೈರು ನಾಟಿ, ಸಾಕಷ್ಟು ಅಂತರ ನೀಡುವಿಕೆಯಿಂದಾಗಿ ಯತೇಚ್ಛ ತೆಂಡೆ ಬರುತ್ತದೆ. ವೀಡರ್ ಬಳಕೆಯಿಂದ ಮಣ್ಣು ಸಡಿಲಗೊಂಡು ಬೇರುಗಳ ಬೆಳವಣಿಗೆಗೆ ಸಹಕಾರಿ. ಇದರಿಂದಾಗಿ ಸಹಜವಾಗಿಯೇ ಇಳುವರಿಯೂ ಅಧಿಕವಾಗುತ್ತದೆ.

ಪರಿಸರಕ್ಕೆ ಪೂರಕ

ಭತ್ತದ ಗದ್ದೆಗಳಲ್ಲಿ ಯತೇಚ್ಛ ನೀರು ನಿಲ್ಲಿಸುವುದರಿಂದ ಮಿಥೇನ್ ಉತ್ಪತ್ತಿಯಾಗಿ ಗಾಳಿಯಲ್ಲಿ ಸೇರಿ ಪರಿಸರಕ್ಕೆ ಧಕ್ಕೆಯಾಗುತ್ತದೆಂದು ಅಧ್ಯಯನಗಳು ಹೇಳುತ್ತವೆ. ಶ್ರೀ ಪದ್ಧತಿಯಲ್ಲಿ ಸದಾ ನೀರು ನಿಲ್ಲಿಸುವುದಿಲ್ಲವಾದ್ದರಿಂದ ಆ ಸಮಸ್ಯೆಗೆ ಕಡಿವಾಣ ಹಾಕಬಹುದು.

ಕಳೆ ತೆಗೆಯುವುದು ಸುಲಭ

ಸಾಲು ನಾಟಿ ಹಾಕುವುದರಿಂದ ವೀಡರ್ (ಕಳೆ ತೆಗೆಯುವ ಕೈಚಾಲಿತ ಸಾಧನ) ಬಳಸಿ ಸುಲಭವಾಗಿ ಕಳೆ ತೆಗೆಯಬಹುದು. ಕೂಲಿಕಾರರ ಅವಲಂಬನೆ ಹೆಚ್ಚಾಗಿರುವುದಿಲ್ಲ. ಯಂತ್ರಗಳನ್ನು ಬಳಸಿ ಕಟಾವು ಮಾಡಲೂ ಸಹಕಾರಿ. ನಾಟಿಗೆ ಹೆಚ್ಚು ಕೂಲಿಕಾರರು ಬೇಕಾದರೂ ಕಳೆ ಹಾಗೂ ಕಟಾವಿನ ಸಮಯದಲ್ಲಿ ಕಡಿಮೆ ಸಾಕು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಮುಖ್ಯ ಅಭಿಯಂತರರು, ಯೋಜನಾ ಅನುಷ್ಠಾನ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನೆ, ಶಿವಮೊಗ್ಗ-577201

ಭದ್ರಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ
ಮಲವಗೊಪ್ಪ, ಶಿವಮೊಗ್ಗ-577222

ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್
ನಂ. 28, 1ನೇ ಅಡ್ಡರಸ್ತೆ ಬೀದಿ, ಗಾಂಧಿ ನಗರ,
ಭಂಡಾರಿ ಗ್ಯಾಸ್ ಏಜನ್ಸಿ ಎದುರು, ಶಿವಮೊಗ್ಗ-577201

ಮುದ್ರಣ: ರಾಯಲ್, ಶಿವಮೊಗ್ಗ, 98862 73495

ADB ASIAN DEVELOPMENT BANK | SMEC Member of the Sustainia Jurong Group

ಕರ್ನಾಟಕ ಸಮಗ್ರ ಮತ್ತು ಸುಸ್ಥಿರ
ಜಲ ಸಂಪನ್ಮೂಲ ನಿರ್ವಹಣೆ ಹೂಡಿಕೆ ಯೋಜನೆ

'ಶ್ರೀ' ಪದ್ಧತಿ
ಕಡಿಮೆ ನೀರು ಅಧಿಕ ಇಳುವರಿ

ಹಣಕಾಸು ನೆರವು:
ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್
ಅನುಷ್ಠಾನ:
ಕರ್ನಾಟಕ ನೀರಾವರಿ ನಿಗಮ ನಿಯಮಿತ
ಯೋಜನಾ ಸಹಾಯ ಸಂಸ್ಥೆ:
ಎಸ್.ಎಂ.ಇ.ಸಿ. ಇಂಡಿಯಾ ಪ್ರೈವೇಟ್ ಲಿಮಿಟೆಡ್
ಸಹಯೋಗ:
ಭದ್ರಾ ಕಾಡಾ, ಗೊಂದಿ ನೀರು ಬಳಕೆದಾರರ ಸಹಕಾರ ಸಂಘಗಳು

ಗೊಂದಿ ಕಾಲುವೆ ಆಧುನೀಕರಣ

ಗೊಂದಿ ನೀರಾವರಿ ಕಾಲುವೆಗಳ ಆಧುನೀಕರಣದ ಮೂಲಕ ಕೃಷಿ ಉತ್ಪಾದಕತೆ ಹೆಚ್ಚಿಸುವುದು, ಎಲ್ಲ ರೈತರಿಗೂ ನೀರಿನ ಸಮಾನ ಹಂಚಿಕೆ, ಕಾಲುವೆ ಕೊನೆಯ ರೈತರಿಗೂ ನೀರು ಲಭಿಸುವಂತೆ ಮಾಡುವುದು ಪ್ರಮುಖ ಉದ್ದೇಶ. ಜೊತೆಗೆ ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಕಾಮಗಾರಿಗಳ ಅನುಷ್ಠಾನ ಮತ್ತು ನಿರ್ವಹಣೆ, ಸಂಘಗಳ ಸಾಮರ್ಥ್ಯ ಬಲವರ್ಧನೆ, ನೀರಿನ ಪರಿಣಾಮಕಾರಿ ಬಳಕೆಗೆ ಉತ್ತೇಜನ ಮುಂತಾದ ಹಲವು ಚಟುವಟಿಕೆಗಳು ಯೋಜನೆಯಲ್ಲಿ ಒಳಗೊಂಡಿವೆ.

ಕೃಷಿಯಲ್ಲಿ ನೀರಿನ ಪರಿಣಾಮಕಾರಿ ಬಳಕೆಯನ್ನು ಉತ್ತೇಜಿಸಲು ಹಲವು ಚಟುವಟಿಕೆಗಳನ್ನು ಯೋಜಿಸಲಾಗಿದೆ. ಮುಖ್ಯವಾಗಿ ರೈತ ಕ್ಷೇತ್ರ ಪಾಠಶಾಲೆ, ಸುಧಾರಿತ ಬೇಸಾಯ ತರಬೇತಿ, ಅಧ್ಯಯನ ಪ್ರವಾಸ ಮುಂತಾದವು ಇದರಲ್ಲಿ ಸೇರಿವೆ. ಇವುಗಳ ಜೊತೆಗೆ 'ಶ್ರೀ' ಪದ್ಧತಿ ಅನುಸರಿಸಿ ಭತ್ತ ಬೆಳೆಯುವ ವಿಧಾನದ ಬಗ್ಗೆ ಹೆಚ್ಚಿನ ಪ್ರಮಾಣದಲ್ಲಿ ಅರಿವು ಮೂಡಿಸುವುದು ಯೋಜನೆಯ ಧ್ಯೇಯವಾಗಿದೆ.

'ಶ್ರೀ' ಪದ್ಧತಿ
(SRI System of Rice Intensification)

ಹೆಚ್ಚುತ್ತಿರುವ ಜನಸಂಖ್ಯೆ, ವಿವಿಧ ವಲಯಗಳಲ್ಲಿ ನೀರಿನ ಬೇಡಿಕೆ, ಅಸಮರ್ಪಕ ನಿರ್ವಹಣೆ ಮುಂತಾದ ಅನೇಕ ಕಾರಣಗಳಿಂದ ನೀರಿನ ಅಭಾವ ವಿಪರೀತ ಹೆಚ್ಚುತ್ತಿದೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಬೇಸಾಯದ ಉಳಿವು ಮತ್ತು ಉನ್ನತಿ ಅಡಗಿರುವುದು ಸಂಪನ್ಮೂಲಗಳ ಜಾಣ್ಮೆಯ ಬಳಕೆಯಲ್ಲಿ. ಹೆಚ್ಚು ನೀರನ್ನು ಬಯಸುವ ಭತ್ತದ ಬೆಳೆಯಲ್ಲಿ ನೀರಿನ ಮಿತ ಬಳಕೆಯ ಬಗ್ಗೆ ಹೆಚ್ಚಿನ ಆದ್ಯತೆ ನೀಡುವುದು ತುರ್ತಿನ ಕೆಲಸ. 'ಶ್ರೀ' ಪದ್ಧತಿ ಅನುಸರಿಸುವುದರಿಂದ ಇದು ಸಾಧ್ಯ.

ಕಡಿಮೆ ನೀರು, ಬೀಜ ಹಾಗೂ ಹೆಚ್ಚು ಅಂತರ ಕೊಟ್ಟು ಅಧಿಕ ಇಳುವರಿ ಪಡೆಯುವ ವಿಧಾವೇ ಶ್ರೀಪದ್ಧತಿ. ಇದರ ಅನುಸರಣೆಯಿಂದ ಬಿತ್ತನೆ ಬೀಜದಲ್ಲಿ ಉಳಿತಾಯ, ಶೇಕಡ 60ರಷ್ಟು ನೀರಿನ ಉಳಿತಾಯ, ಮಣ್ಣಿನ ರಚನೆಯಲ್ಲಿ ಸುಧಾರಣೆ ಹಾಗೂ ಇಳುವರಿಯಲ್ಲಿ ಶೇಕಡ 36ಕ್ಕೂ ಅಧಿಕ ಹೆಚ್ಚಳ ಸಾಧ್ಯ.

ಉಪಯೋಗಗಳು

ಕಾಲುವೆ ಅಚ್ಚುಕಟ್ಟು ಪ್ರದೇಶದಲ್ಲಿ ಶ್ರೀ ಪದ್ಧತಿ ಅನುಸರಿಸುವುದರಿಂದ ಅನೇಕ ಅನುಕೂಲಗಳಿವೆ. ಮುಖ್ಯವಾಗಿ;

ಬಿತ್ತನೆ ಬೀಜದಲ್ಲಿ ಉಳಿತಾಯ

ಪ್ರಚಲಿತ ಪದ್ಧತಿ- ಅಂದರೆ ರೈತರು ಅನುಸರಿಸುತ್ತಿರುವ ಸಾಂಪ್ರದಾಯಿಕ ಭತ್ತ ಬಿತ್ತನೆ ವಿಧಾನದಲ್ಲಿ ಪ್ರತಿ ಎಕರೆಗೆ 25-30 ಕೆ.ಜಿ. ಬೀಜ ಬೇಕಾಗುತ್ತದೆ. ಆದರೆ ಶ್ರೀ ಪದ್ಧತಿಯಲ್ಲಿ ಕೇವಲ 2 ಕೆ.ಜಿ. ಬೀಜ ಸಾಕು. ಅಂದರೆ ಶೇಕಡ 90ಕ್ಕೂ ಅಧಿಕ ಬೀಜದ ಉಳಿತಾಯ.

ನೀರಿನಲ್ಲಿ ಉಳಿತಾಯ

ಇದು ಅತ್ಯಂತ ಪ್ರಮುಖವಾದುದು. ಪ್ರಚಲಿತ ಪದ್ಧತಿಯಲ್ಲಿ ಭತ್ತ ಬೆಳೆಯಲು ಎಕರೆಗೆ ಸುಮಾರು 50 ಲಕ್ಷ ಲೀಟರ್ ನೀರು ಬೇಕು. ಅಂದರೆ ಒಂದು ಕೆ.ಜಿ. ಭತ್ತ ಬೆಳೆಯಲು 3700 ಲೀಟರ್ ನೀರು ಅಗತ್ಯ. ಆದರೆ ಶ್ರೀ ಪದ್ಧತಿ ಅಳವಡಿಕೆಯಿಂದ ಎಕರೆಗೆ 21 ಲಕ್ಷ ಲೀಟರ್ ನೀರು ಸಾಕು. ಅಂದರೆ ಒಂದು ಕೆ.ಜಿ.ಗೆ 1480 ಲೀಟರ್ ಸಾಕಾಗುತ್ತದೆ. ಒಟ್ಟಾರೆ ಶೇ 60ರಷ್ಟು ನೀರನ್ನು ಉಳಿಸಬಹುದು. ಇದರಿಂದ ಕೊನೆ ಕಾಲುವೆ ರೈತರಿಗೂ ನೀರು ಸಾಕಷ್ಟು ದೊರೆಯುವುದಲ್ಲದೆ ಎರಡನೇ ಬೆಳೆ ಇಡಲೂ ಸಹಕಾರಿ.

ಕೀಟ/ರೋಗದ ಹಾವಳಿ ಕಡಿಮೆ

ಸಸಿಯಿಂದ ಸಸಿಗೆ ಹಾಗೂ ಸಾಲಿನಿಂದ ಸಾಲಿಗೆ ಒಂದು ಅಡಿ ಅಂತರ ಬಿಡುವುದರಿಂದ ಗಾಳಿ ಬೆಳಕು ಸಸಿಗಳ ಎಲ್ಲಾ ಭಾಗಕ್ಕೂ ಚೆನ್ನಾಗಿ ಬೀಳುತ್ತದೆ. ಹಾಗಾಗಿ ಕೀಟ/ರೋಗದ ಹಾವಳಿ ಕಡಿಮೆ.

ಶ್ರೀ ಪದ್ಧತಿಯ ವಿವಿಧ ಹಂತಗಳು

ಸಾಲು ಹೊಡೆಯುವುದು

ನಾಟಿ ಮಾಡುವುದು

ಪೈರು ಬೆಳವಣಿಗೆ ಹಂತದಲ್ಲಿ

ವೀಡರ್ ಬಳಸಿ ಅಂತರ ಬೇಸಾಯ

ತೆನೆ ಹಂತ